Sri S. R. KANTHI.—That is a suggestion for action.

ಶ್ರೀ ಎ. ಜೆ. ದೊಡ್ಡಮೇಟಿ.—ಒಂದು ಸಾವಿರ ರೂಪಾಯಿ ಮಾತ್ರ ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿದ ನಂತರ ಎಷ್ಟು ಹಳ್ಳಿಗಳ ಜನರು ಕಟ್ಟಡ ಕಟ್ಟಿಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಸ್ವಾಮಿ, ಈ ನೋಟಿಫಿಕೇಷನ್ ಹೊರಟಿರುವುದು ೪-೧೧-೬೬ರಲ್ಲಿ.

ಶ್ರೀ ಎ. ಜೆ. ದೊಡ್ಡಮೇಟಿ.—ಹೀಗೆ ಮಿತಿಗೊಳಿಸಿರುವುದರಿಂದ ಯಾರು ಕಟ್ಟಡಗಳನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲದಿರುವ ಕಾರಣ ಈ ಆಜ್ಞೆಯನ್ನು ಸರ್ಕಾರದವರು ಪುನರ್ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎಸ್. ಆರ್. ಕಂಠಿ.—ಪುನರ್ಪರಿಶೀಲನೆಮಾಡಲು ಸರ್ಕಾರ ಯಾವಾಗಲೂ ಸಿದ್ಧ, ಆದರೆ ಕಾಲ ಬರಬೇಕು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟೋ ಕಟ್ಟಡಗಳು ಬಿದ್ದು ಹೋಗಿವೆ, ಅವಕ್ಕೇನು ಮಾಡುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಂಥವಕ್ಕೇನು ಮಾಡುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ರೂಲ್ಸ್ ಪ್ರಕಾರ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ತಾಲ್ಲೂಕು ಬೋರ್ಡುಗಳೂ ಗ್ರಾಮ ಪಂಚಾಯಿತಿಗಳೂ ಉಳಿದ ಲಂಚ ರೂಪಾಯಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಈ ವಿಷಯವನ್ನು ಪ್ಲಾನಿಂಗ್ ಕಮಿಷನ್ನಿಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಪ್ಲಾನಿಂಗ್ ಕಮಿಷನವರು ಹೆಚ್ಚಿಗೆ ಕೊಡುವುದಿಲ್ಲವೆಂದು ನಿರ್ಧಾರ ಮಾಡಿದ್ದಾರೆ, ಇದನ್ನು ಸರ್ಕಾರದವರು ಕೊಡುತ್ತಾರೆಯೆ ಇಲ್ಲವೆ ಎನ್ನುವುದನ್ನು ಪುನರ್ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಇ. ನಾರಾಯಣಗೌಡ.—ಎಲ್ಲ ಶಾಲಾಕಟ್ಟಡಗಳ ವಿಷಯದಲ್ಲಯೂ ಒಂದೇ ನೀತಿಯನ್ನನುಸರಿಸಲಾಗುತ್ತದೆಂದು ಹೇಳಿದರು, ಆದರೆ ಪಟ್ಟಣಗಳಲ್ಲಿರುವ ಕೆಲವು ಸ್ಕೂಲುಗಳ "Extension and Improvement" ಗೆ ಪೂರ್ತಿ ಹಣವನ್ನು ಸರ್ಕಾರ ಕೊಡುತ್ತಿರುವುದು ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಅಂಥಾ ಸಂದರ್ಭಗಳನ್ನು ಗಮನಕ್ಕೆ ತಂದರೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ಎಲ್. ಗೌಡ.—ಹಿಂದೆ ಸರ್ಕಾರ ಸೇಕಡ 60ರಷ್ಟು ಕೊಡಬೇಕೆಂದಿದ್ದಾಗ ಮಂಜೂರಾಗಿದ್ದ ಕಟ್ಟಡಗಳಿಗೂ ಈ ಹೊಸ ನೀತಿಯನ್ನನ್ವಯಿಸುತ್ತಿದ್ದು ಕಷ್ಟವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ಲಾನಿಂಗ್ ಕಮಿಷನವರು ಹಳ್ಳಿಗಳಲ್ಲಿ ಯೋಜನೆಗಳೇ ಕಾರ್ಯಗತವಾಗಬೇಕೆಂದು ಹೇಳುತ್ತಾರೆ; ಆದುದರಿಂದ ಹಳ್ಳಿಗಳಲ್ಲಿ ಕಟ್ಟತಕ್ಕ ಈ ಶಾಲೆಗಳ ವಿಚಾರವನ್ನು ತೀವ್ರ ಪರಿಶೀಲನೆ ಮಾಡಿ, ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರದವರು ಖಚಿತ ಅಭಿಪ್ರಾಯ ಹೇಳಲು ಪ್ರಯತ್ನ ಮಾಡುತ್ತಾರೆಯೆ?

ಶ್ರೀ ಎಸ್. ಆರ್. ಕಂಠಿ.—ಅವರು ಕೊಟ್ಟಿರುವ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಬಿ. ಎಲ್. ಗೌಡ.—೪-೧೧-೬೬ರಲ್ಲಿ ಈ ಹೊಸ ನೀತಿಯ ಪ್ರಕಾರ ರೂಲ್ಸ್ ಮಾಡಿದಿರಿ; ಅದಕ್ಕೆ ಹಿಂದೆ ಸೇಕಡ 60 ರಷ್ಟು ಸರ್ಕಾರದವರು ಕೊಡುತ್ತಾರೆಂದು ಕೆಲವು ಕಟ್ಟಡಗಳನ್ನು ತೆಗೆದು ಕೊಂಡಿದ್ದೇವೆ, ಅವಕ್ಕೂ ಹೊಸ ನೀತಿಯನ್ನನುಸರಿಸುತ್ತಿರುವುದು ಗೊತ್ತಿದೆಯೆ? ಅದಕ್ಕೆ ಪರಿಹಾರವೇನು?

ಶ್ರೀ ಎಸ್. ಆರ್. ಕಂಠಿ.—೪-೧೧-೬೬ಕ್ಕಿಂತ ಮುಂಚೆ ಸರ್ಕಾರದವರು ಸೇಕಡ 60 ರಷ್ಟು ಕೊಡುತ್ತೇವೆಂದು ಒಪ್ಪಿಕೊಂಡಿದ್ದರೆ ಅದರಂತೆ ನಡೆಸುತ್ತಾರೆ, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಂದು ಸಾವಿರ ರೂಪಾಯಿ ಪ್ಲಾನಿಂಗ್ ಕಮಿಷನ್ ಕೊಟ್ಟರೂ, ಸ್ಥಳೀಯ ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಕೆಟ್ಟಿದ್ದು, ಉಳಿದ ಹಣವನ್ನು ಕೊಡಲು ಸಾಧ್ಯವಾಗದಿದ್ದರೆ, ಸರ್ಕಾರದವರು ಸಾಲರೂಪವಾಗಿಯಾದರೂ ಮಿಕ್ಕ ಹಣವನ್ನು ಕೊಡುತ್ತಾರೆಯೆ?

Sri S. R. KANTHI.—That is a suggestion for action.

ಶ್ರೀ ಜಿ. ಪೆಂಕಟೇ ಗೌಡ.—ಪ್ರೈಮರಿ ವಿದ್ಯಾಭ್ಯಾಸ ಸರ್ಕಾರದ ಜವಾಬ್ದಾರಿಯಾಗಿರುವುದರಿಂದ ಅದಕ್ಕೆ ಬೇಕಾದ ಕಟ್ಟಡಗಳನ್ನು ಕಟ್ಟುವ ನೈತಿಕ ಹೊಣೆ ಸರಕಾರದ ಮೇಲಿಲ್ಲವೆ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರ, ಜನತೆ ಮತ್ತು ಪ್ಲಾನಿಂಗ್ ಕಮಿಷನ್ ಈ ಎಲ್ಲರ ಜವಾಬ್ದಾರಿಯೂ ಆಗಿದೆ.

9-30 A.M.

Business of the House

Sri S. SHIVAPPA (Shravanabelgola).—On a point of procedure, Sir. ಈ ಸಭೆಯಲ್ಲಿ ಬಜೆಟ್ ಮಂಡನೆ ಮಾಡಿದ್ದಾರೆ. ಅದರ ಚರ್ಚೆಗೆ ಕಾಲ ನಿಗದಿಮಾಡುವುದು ಸಭಾಧ್ಯಕ್ಷರಿಗೆ ಸೇರಿದ ವಿಚಾರ. ಕಾಣಿಕಾಸಿನ ಮುನ್ನೂಚನಾಪತ್ರ 22 ನೆಯ ತಾರೀಖಿನ ಮುಂದಿನವಲ್ಲರೂ ಇದುವರೆಗೂ ಕೂಡ ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಯಾವಾಗ ನಡೆಯುತ್ತದೆಯೆಂಬುದನ್ನು ಪ್ರೋಗ್ರಾಂನಲ್ಲಿ ಸೂಚಿಸಿಲ್ಲ. ಈ ವಿಚಾರದಲ್ಲೇನು ವ್ಯವಸ್ಥೆ ಮಾಡಿದ್ದಾರೆಂಬುದು ಇದುವರೆಗೂ ಗೊತ್ತಾಗಿಲ್ಲ. ಈಗಿನ ಕಾರ್ಯಕ್ರಮದ ಪ್ರಕಾರ ಈ ಸಭೆಯ ಪುನಕ್ಕ ಅಧಿವೇಶನ ಈ ದಿವಸ ಮುಕ್ತಾಯವಾಗುವ ಸೂಚನೆಯಿದೆ. ಹಾಗಾದರೆ ಬಜೆಟ್ಟಿನ ವಿಚಾರದಲ್ಲೇನು ಕಾರ್ಯಕ್ರಮವಿದೆ ಎಂಬುದನ್ನು ತಿಳಿಸಬೇಕು. ಈ ಸಭೆಯಲ್ಲಿ ಒಂದು ಸಾರಿ ಬಜೆಟ್ ಮಂಡಿಸಿದ ಮೇಲೆ ಮುಂದೆ ಅನಿರ್ದಿಷ್ಟಕಾಲದವರೆಗೆ ಅದರ ಮೇಲೆ ಚರ್ಚೆ ಮುಂದುವರಿಸಲು ಅವಕಾಶ ವಿದೆಯೆ? 162 ನೆಯ ನಿಬಂಧನೆಯಲ್ಲಿ ಬಜೆಟ್ ಚರ್ಚೆ ವಿಷಯವು ಖಚಿತವಾಗಿ ಸೂಚಿಸಲ್ಪಟ್ಟಿದೆ.

> "The Budget shall be dealt with by the Assembly in two stages, namely,—
>
> (*a*) a general discussion; and
> (*b*) the voting of demands for grants."

So, the budget should be dealt with by this House when it has been presented. The rules have definitely provided that discussion of the budget should take place now. As per the scheduled porgramme, no mention has been made for discussion of the budget. I feel that our rights and privileges have been taken away.

ಈ ಒಂದು ಅನಿಶ್ಚಿತ ವಾತಾವರಣದಲ್ಲಿ ಹಣಕಾಸಿನ ಮೇಲಿನ ಚರ್ಚೆಯನ್ನು ಅನಿರ್ದಿಷ್ಟ ಕಾಲ ಮುಂದು ವರಿಸಿದರೆ ಒಂದು ಪವಿತ್ರತೆಗೆ ಭಂಗಬರುತ್ತದೆ. ನಮಗೆ ಬಡ್ಜೆಟ್ ಪುಸ್ತಕಗಳನ್ನು ಕೊಟ್ಟಿದ್ದಾರೆ. ಈಗ ನಾಲ್ಕುತಿಂಗಳಿಗೆ ಬೇಕಾಗಿರುವ ಹಣಕ್ಕೆ ಮಂಜೂರಾತಿ ಪಡೆದಿರುವುದರಿಂದ ನಾಲ್ಕುತಿಂಗಳ ವರೆಗೆ ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆಯನ್ನು ಮುಂದಕ್ಕೆ ಹಾಕುವುದಕ್ಕೆ ಮತ್ತು ಬೇಕಾದಾಗ ಅವಕಾಶ ಕೊಡಲು ದಾರಿ ಮಾಡಿಕೊಟ್ಟಂತಾಗುತ್ತದೆ. ಪ್ರೋಗ್ರಾಂ ನಿಷ್ಕರ್ಷೆಮಾಡುವಾಗ ಎಷ್ಟು ದಿವಸ ಬಡ್ಜೆಟ್ ಚರ್ಚೆಗೆ ಮೀಸಲಾಗಿಡ ಬೇಕೆಂಬುದು ಅಧ್ಯಕ್ಷರಿಗೆ ಸಂಬಂಧಪಟ್ಟಿರುವ ವಿಚಾರ ವಾಗಿದೆ. ಆದುದರಿಂದ ರೂಲ್ಸ್ ಪ್ರಕಾರ ಅಧ್ಯಕ್ಷರು ಸಭಾನಾಯಕರ ಸಂಗಡ ಚರ್ಚೆಮಾಡಿ ಈ ಸಭೆಗೆ ಬಡ್ಜೆಟ್ ಚರ್ಚೆಗೆ ಎಷ್ಟು ದಿವಸಗಳ ಅವಕಾಶ ಕೊಡ ಬೇಕೆಂಬುದನ್ನು ತೀರ್ಮಾನಮಾಡಿ ನಿರ್ದಿಷ್ಟವಾಗಿ ಈಗಲೇ ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೆಕೆರೆ).—ನಾಲ್ಕು ತಿಂಗಳಿಗೆ ಮಾತ್ರ ಬಡ್ಜೆಟ್ ಮಂಜೂರಾಗಿರುವುದರಿಂದ ವಾರ್ಷಿಕ ಬಡ್ಜೆಟ್ ಚರ್ಚೆಯನ್ನು ಈ ಕೂಡಲೆ ತೆಗೆದು ಕೊಳ್ಳಬೇಕು.

ಶ್ರೀ ಎಸ್. ಆರ್. ಕಂಠಿ.—ಈಗ ಅವರು ಹೇಳಿದ ವಿಚಾರ ಸಂಪೂರ್ಣವಾಗಿ ನನಗೆ ಮನಪರಿಕಯಾಗ ಲಲ್ಲ. ನಾಲ್ಕುತಿಂಗಳಿಗೆ ಬೇಕಾದ ಹಣಕ್ಕೆ ಮಾತ್ರ ಒಪ್ಪಿಗೆ ತೆಗೆದುಕೊಂಡಿರುವುದರಿಂದ ಬಡ್ಜೆಟ್ ಚರ್ಚೆ ಯನ್ನೇಕೆ ಮುಂದಕ್ಕೆ ಹಾಕುವುದು, ಈಗಲೇ ತೆಗೆದು ಕೊಳ್ಳಿ ಎಂದು ಅವರು ಹೇಳಿದಂತೆ ನನಗೆ ಅರ್ಥವಾ ಯಿತು. ನಾಲ್ಕುತಿಂಗಳಲ್ಲಿ ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು. ರೂಲ್ಸ್ ಪ್ರಕಾರ ಜನರಲ್ ಡಿಬೇಟಿಗೆ ದಿವಸಗಳ ಸಂಖ್ಯೆಯನ್ನು ನಿಗದಿಮಾಡ ಬಹುದು, ಈಗಲೇ ತೆಗೆದುಕೊಳ್ಳಬೇಕೆಂಬ ನಿರ್ಬಂಧ ವಿಲ್ಲ. ಮುಂದೆ ಕಾಲಾವಕಾಶವಿರುವಾಗ ತೆಗೆದು ಕೊಳ್ಳುವುದಕ್ಕೆ ಬರುತ್ತದೆ. ತೆಗೆದುಕೊಳ್ಳದಿದ್ದರೆ ಸರ್ಕಾರ ನಡೆಯಲು ಹಣ ವಿರುವುದಿಲ್ಲ. ನಾಲ್ಕು ತಿಂಗಳ ಅವಕಾಶವಿರುವುದರಿಂದ ಸರಿಯಾದ ಕಾಲ ದಲ್ಲಿ ತೆಗೆದುಕೊಂಡು ಬಡ್ಜೆಟ್ಟಿಗೆ ಅಂಗೀಕಾರ ಪಡೆ ಯಲು ಸರ್ಕಾರ ಪ್ರಯತ್ನಮಾಡುತ್ತದೆ. ಈಗ ಇಷ್ಟು ಅವಸರವೇಕೋ ಗೊತ್ತಾಗಲಿಲ್ಲ. ಮಂತ್ರಿ ಗಳು ಮತ್ತು ಸದಸ್ಯರೆಲ್ಲರೂ ಬಡ್ಜೆಟ್ಟನ್ನು ಚೆನ್ನಾಗಿ ಓದಿಕೊಂಡು ಬರಬೇಕಾದ್ದು ಅವಶ್ಯ ವಿರುವುದರಿಂದ ಕೆಲವು ಕಾಲ ಮುಂದೆ ಹಾಕಿದ್ದೇವೆ. ಈಗಲೇ ತೆಗೆದು ಕೊಳ್ಳಲು ಅಭ್ಯಂತರವಿಲ್ಲ, ನಾನು ನನ್ನ ಮಟ್ಟಿಗೆ ಸಿದ್ಧವಾಗಿದ್ದೇನೆ. ಆದರೆ ಅದರಿಂದ ಯೋಗ್ಯ ವಾದಂಥ ಬಡ್ಜೆಟ್ ಚರ್ಚೆಯಾಗುವುದಿಲ್ಲ ಎಂಬ ದೃಷ್ಟಿಯಿಂದ ಮುಂದುವರಿಸಲಾಗಿದೆ ಎಂದು ವಿದಿತ ಪಡಿಸುತ್ತೇನೆ.

Sri G. VENKATAI GOWDA (Palya).—That is not correct. All these years we are having the budget discussion at a stretch The Chief Minister says that we should go and study and come back.

ಶ್ರೀ ಎಸ್. ಆರ್. ಕಂಠಿ.—ಅವರು ಹೇಳುವುದು ಸರಿಯಲ್ಲ. ಈ ವರ್ಷ ಯಾವ ರಾಜ್ಯವನ್ನೇ ತೆಗೆದು ಕೊಳ್ಳಲಿ, ಕೇಂದ್ರ ಸರ್ಕಾರವನ್ನು ತೆಗೆದುಕೊಳ್ಳಲಿ, ಎಲ್ಲಾ ಕಡೆಯೂ ಓಟ್ ಆನ್ ಅಕೌಂಟ್ ತೆಗೆದುಕೊಂಡು ಮುಂದೆ ಬಡ್ಜೆಟ್ ಚರ್ಚೆಯನ್ನು ಮಾಡುತ್ತಾರೆ. ಪ್ರತಿಯೊಂದು ಸಲವೂ ಮಹಾಚುನಾವಣೆಯಾದ ಮೇಲೆ ಮಾಡುವುದೇ ಹೀಗೆ. ಆದುದರಿಂದ ಇದೇನೂ ಹೊಸದಲ್ಲ. ಪ್ರತಿ ಪಕ್ಷದವರಿಗೆ ಇದು ಗೊತ್ತಿರ ಬೇಕು. ಈ ಚರ್ಚೆಯನ್ನು ಮುಂದಕ್ಕೆ ಹಾಕಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಬಡ್ಜೆಟ್ ಈ ಅಧಿವೇಶನದಲ್ಲಿ ಮಂಡಿಸಲ್ಪಟ್ಟಿರುವುದರಿಂದ ಮುಂದಿನ ಅಧಿವೇಶನ ದಲ್ಲಿ ಅದರ ಚರ್ಚೆ ಮಾಡಬಹುದೆ ಎಂಬುದು ಈಗ ಮುಖ್ಯವಾಗಿರುವ ಪ್ರಶ್ನೆ. ಹಾಗೆ ಮಾಡಬೇಕಾದರೆ ಇದರ ಮುಂದಿನ ಅಧಿವೇಶನ ಮುಂದುವರಿದ ಅಧಿ ವೇಶನವಾಗಬೇಕು ಬಡ್ಜೆಟ್ ಸರಿಯಾಗಿ ಓದಿಲ್ಲದಿದ್ದರೆ ಮಂತ್ರಿಗಳಿಗಾಗಿ ಬೇಕಾದರೆ ಒಂದು ವಾರಕಾಲ ಮುಂದುವರಿಸಿ ಅವಕಾಶ ಕೊಡೋಣ. ಅದನ್ನು ಬಿಟ್ಟು ಈ ಅಧಿವೇಶನವನ್ನು ಅನಿರ್ದಿಷ್ಟ ಕಾಲ ಮುಂದು ವರಿಸಿ ಬೇರೊಂದು ಅಧಿವೇಶನದಲ್ಲಿ ಚರ್ಚಿಸಲು ಅವಕಾಶ ಖಂಡಿತವಿಲ್ಲ; ಮುಂದುವರಿದ ಅಧಿವೇಶ ನವೇ ಆಗಬೇಕು. ಬೇರೊಂದು ಅಧಿವೇಶನದಲ್ಲಿ ಚರ್ಚಿಸಲು ಅವಕಾಶ ಕೊಡುವಂತಿದ್ದರೆ ಈಗ ಬಡ್ಜೆಟ್ ಮಂಡನೆ ಮಾಡಬಾರದಾಗಿತ್ತು. ಈಗ ಬಡ್ಜೆಟ್ ಭಾಷಣ ಮಾಡಿ ಬಡ್ಜೆಟ್ ಮಂಡಿಸಿದ್ದಾಗಿದೆ. ಆದುದ ರಿಂದ ಈಗಲೇ ಇದರ ಚರ್ಚೆ ಆರಂಭಿಸಬೇಕಾದ್ದು ಅಗತ್ಯ. ಈ ಅಧಿವೇಶನವನ್ನು ಒಂದು ನಿರ್ದಿಷ್ಟ ತಾರೀಖಿಗೆ ಮುಂದುವರಿಸಲು ಅವಕಾಶವಿದೆ. ಹಾಗಿ ಲ್ಲದೆ ಮುಂದಿನ ಅಧಿವೇಶನದಲ್ಲಿ ಚರ್ಚಿಸಬಹುದೆಂದು ಹೇಳುವುದು ಸರಿಯಿಲ್ಲ. ಈ ಅಧಿವೇಶನವು ಸೈನ್‌ಡೈ ಎಂದು ಮುಂದುವರಿದರೆ ಸರ್ಕಾರದವರು ತಮ ಗಿಷ್ಟ ಬಂದಾಗ ಮುಂದಿನ ಅಧಿವೇಶನವನ್ನು ಕರೆಯ ಬಹುದು. 116 ನೆಯ ರೂಲ್ ಪ್ರಕಾರ ಯಾವ ದಿವಸ ದಿಂದ ಎಷ್ಟು ಕಾಲ ಚರ್ಚೆ ಮಾಡಬೇಕೆಂಬುದನ್ನು ಅಧ್ಯಕ್ಷರು ನಿಷ್ಕರ್ಷೆಮಾಡಬೇಕು. ಆದುದರಿಂದ ನಿರ್ದಿಷ್ಟವಾಗಿ ಇಂಥಾದಿವಸ ಬಡ್ಜೆಟ್ ಚರ್ಚೆಇದೆ ಎಂದು ಹೇಳಬೇಕು. ಈಗ ಒಂದು ಅನಿಶ್ಚಿತ ವಾತಾ ವರಣವಿದೆ; ಮಂತ್ರಿ ಮಂಡಲ ಅನಿಶ್ಚಿತ ವಾತಾ ವರಣದಲ್ಲಿರುವಾಗ ಹಣಕಾಸಿನ ಚರ್ಚೆ ಯಾವಾಗ ನಡೆಯುತ್ತದೆಯೆಂಬ ವಿಚಾರದಲ್ಲಿ ಕಳವಳಕ್ಕೆ ಆಸ್ಪದ ಕೊಡದಂತೆ ನಿರ್ದಿಷ್ಟವಾಗಿ ತಾರೀಖನ್ನು ತಿಳಿಸ ಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ಪೀಕರ್, ಒಂದು ಸಂಪ್ರದಾಯ ಏನಿದೆ ಎಂದರೆ ಚುನಾವಣೆ ಆಗಿ ಮಂತ್ರಿ ಮಂಡಲ ರಚನೆ ಆದಮೇಲೆ, ಮುಖ್ಯ ಮಂತ್ರಿ ಗಳು, ಮಂತ್ರಿಗಳು ಮತ್ತು ಅಧ್ಯಕ್ಷರು ಯಾವ ಯಾವ ಮನೆಗಳಲ್ಲಿ ವಾಸವಾಗಿದ್ದಾರೆ ಎಂಬ ಬಗ್ಗೆ ಚೀಫ್ ಸೆಕ್ರೆಟರಿಯವರು ಒಂದು ನೋಟಿಫಿಕೇಷನ್ ಹೊರಡಿ ಸುತ್ತಿದ್ದರು. ಆದರೆ ಈಗ ಅದನ್ನು ಅವರು ಹೊರಡಿ ಸಲಿಲ್ಲ. ನಮಗೆ ಈಗ ಅವರ ವಾಸದ ಗೃಹಗಳು ಯಾವುವು, ಮತ್ತು ಅವುಗಳ ಟೆಲಿಫೋನ್ ನಂಬರು ಗಳೇನೆಂಬುದು ಗೊತ್ತಿಲ್ಲ. ನಾವೇನಾದರೂ ಮಂತ್ರಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳನ್ನು ನೋಡಬೇಕಾದರೆ ಅಥವಾ ಅವರಿಗೆ ಟೆಲಿಫೋನ್ ಮಾಡಬೇಕಾದರೆ ಅವರು ಎಲ್ಲಿದ್ದಾರೆಂದು ನಾವು ಅರ್ಥ ಮಾಡಿಕೊಳ್ಳಬೇಕು ?

Mr. SPEAKER.—The Hon'ble Member Sri Muckannappa must know that when a point is before the House, he should not complicate and that also by deliberately bringing in extraneous points. Particularly today when there are a large number of members desirous of participating, at a time when the question hour is over and when we are encroaching on the time of the various Hon'ble members who wish to participate in the debate—knowing well as he does as a seasoned parliamentarian, he must not disturb again.

The point raised by the Hon'ble Leader of the Opposition puts me in a very very awkward situation. I heard him say that all work should be brushed a side for discussing the Motion of Thanks, that it should have precedence over everything, and he quoted chapter and verse. He said that he had not finished that business. He raised another point saying that the discussion on the Budget should not be postponed. He is in the Business Advisory Committee and he knows the time even for this particular session and sitting. It is well within his knowledge, and also it is well within the knowledge of the House according to the report that has been moved and adopted. According to that, we are carrying on. That apart, this is nothing new, and nothing new happened overnight yesterday. This point was not raised much earlier. Today, when we are about to disperse, to raise a point on this occasion is not quite happy. He referred to rule 163: "On a day or days to be appointed by the Speaker subsequent to the day on which the Budget is presented and for such time as the Speaker may allot for this purpose, the Assembly shall be at liberty...". No where either in rule 163 or 164 is it said that it should be in continuation or that there should not be any break at all. All that is said is and very rightly, that there cannot be a discussion on the Budget previous to its introduction. It should be subsequent. While saying that it should be subsequent, it is not said that it should be on a particular day. It should be on the date on which the Speaker allots time for it. I am bound to consult the Leader. These conditions have to be complied with. The suggestion, in continuation of today or upon a date that should be fixed today, is a point which has been raised. That it cannot be in continuation of today is also fairly clear from what the Hon'ble Leader of the Opposition said, *i.e.*, it may be adjourned by a week. As to when it will be taken up is a point on which I will say a little later after consulting the Leader. If the Leader of the Opposition had mentioned it yesterday...

Sri S. SHIVAPPA.—When it will be taken—I entirely agree with the Speaker.

Mr. SPEAKER.—I have understood the Leader of the Opposition. When I am expressing myself, if I say anything extraneous or if what I have said is inconclusive, the Hon'ble Leader of the Opposition may remind me. If he had raised it yesterday, I would have had a chance of consulting the Leader yesterday or at least today morning. If he raises it now, I cannot talk to the Leader on the floor of the House. Therefore, I will see what I can do and mention it to him during the tea break.

Before we begin the debate, it is rather very interesting to see that I have got a number of requests from the various Hon'ble Members that they should be permitted to participate, even if it is for a short while. Besides, a suggestion has been made, that if necessary, the period of fifteen minutes may be cut down. Having regard to the number, and particularly to the list received from the Leader, it looks to me that it may not be possible to comply with the request of every member. So Hon'ble Members will kindly appreciate my difficulty and not embarrass by insisting on speaking in this session only and today. The discussions will go on up to a particular time and afterwards, Government will be called upon to reply. I propose that every member will have not more than

ten minutes. It may be less but not more than ten minutes. Sri B. J. Linge Gowda was speaking and he will kindly close in five minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈಗಲಾದರೂ ಮಂತ್ರಿಗಳು ಯಾವ ಯಾವ ಮನೆಗಳಲ್ಲಿ ವಾಸವಾಗಿದ್ದಾರೆ, ಮತ್ತು ಅವರ ಮನೆಗಳ ಟೆಲಿಫೋನ್ ನಂಬರುಗಳೇನು ಎಂಬುದನ್ನು ಸರ್ಕಾರದವರು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಆರ್. ಕಂಠಿ.—ನನಗೆ ಗೊತ್ತಿರುವ ಹಾಗೆ ಶ್ರೀ ಮಾರ್ ಮುಕ್ಕಣ್ಣಪ್ಪನವರು ಯಾವಾಗಲೂ ಮಂತ್ರಿಗಳಿಗೆ ಟೆಲಿಫೋನ್ ಮಾಡುವುದನ್ನು ನಾನು ನೋಡಿಲ್ಲ. ಏನೋ ನಮ್ಮಲ್ಲಿ ಸ್ವಲ್ಪ ಅನ್ಯೋನ್ಯತೆ ವಾಗಿದೆಯೆಂದು ಅವರು ಅದನ್ನು ಕೇಳುತ್ತಿದ್ದಾರೆ.

Mr. SPEAKER.—I do not understand this implied conversation between the Leader of the House and Sri Muckannappa. Sri Muckannappa may kindly meet me during the tea break or in my chambers.

MOTION OF THANKS TO THE GOVERNOR'S ADDRESS

(**Debate** *continued*)

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಸ್ವಾಮಿ, ರಾಜ್ಯಪಾಲರು ಮಾಡಿದ ಭಾಷಣದ ಪ್ಯಾರಾ 23ರಲ್ಲಿ 1962–63ರಲ್ಲಿ ಭಾರಿ ಹಾಗೂ ಮಧ್ಯಮ ತರಗತಿಯ ನೀರಾವರಿಯ ಸಂಬಂಧದ ಕಾರ್ಯಕ್ರಮಕ್ಕಾಗಿ ನಮಾರು 673 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಲಾಗುವುದು. ಆದರೆ ಈ ಹಣ ಸಾಕಾಗಲಾರದೆಂಬುದರಲ್ಲಿ ಸಂದೇಹವಿಲ್ಲ ಎಂದು ಅವರೇ ಹೇಳಿದ್ದಾರೆ. ಸುಖೀ ರಾಜ್ಯದ ಗುರಿಯನ್ನು ನಾವು ಮುಟ್ಟಬೇಕಾದರೆ ನೀರಾವರಿ ಯೋಜನೆಗಳನ್ನು ಅಧಷ್ಟು ಹೆಚ್ಚಿಗೆ ಕಾರ್ಯಗತ ಮಾಡಬೇಕು ಎನ್ನುವುದನ್ನು ನಮ್ಮ ಸರ್ಕಾರದವರು ಮನಗಂಡಿದ್ದಾರೆ. ಆ ಯೋಜನೆ ಫಲಕಾರಿಯಾಗಬೇಕಾದರೆ ಹೆಚ್ಚು ಹಣವನ್ನು ಇಂಡಿಯಾ ಸರ್ಕಾರದಿಂದ ಪಡೆದುಕೊಂಡು ಹೆಚ್ಚಿಗೆ ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಚನ್ನಪಟ್ಟಣದ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯವನ್ನು ಹೇಳುವುದಾದರೆ ಕಣ್ವಾಪ್ರಾಜೆಕ್ಟಿಗೆ ಸಾಕಾದಷ್ಟು ನೀರಿನ ವಸತಿ ಇಲ್ಲದೆ ಅಲ್ಲಿ ತುಂಬಾ ನಷ್ಟವಾಗುತ್ತಿದೆ. ಈ ವಿಷಯ ಸರ್ಕಾರದವರಿಗೂ ಗೊತ್ತಿದೆ. ಇಷ್ಟೇ ಅಲ್ಲದೆ ಇಂಜಿನಿಯರುಗಳು ಮೊದಲು ಮಾಡಿದ ಪ್ಲಾನ ಪ್ರಕಾರ ಮಾಡಿಸಿದ ಕಾಲುವೆಯಿಂದ ಕೂಡ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ನೀರು ಸರಬರಾಜನ್ನು ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ನಮ್ಮ ತಾಲ್ಲೂಕು ಬಹಳ ಜನ ನಿಬಿಡವಾದ ತಾಲ್ಲೂಕು. ಇಡೀ ಮೈಸೂರು ದೇಶದಲ್ಲಿ ಇದು ಬಹಳ ಹೆಚ್ಚಿನ ಜನಸಂಖ್ಯೆ ಇರುವ ಸ್ಥಳ. ಆದ್ದರಿಂದ ಈ ತಾಲ್ಲೂಕಿನಲ್ಲಿ ತರೀ ವ್ಯವಸಾಯವನ್ನು ಮಾಡಬೇಕಾದರೆ ನೀರಾವರಿ ಸೌಕರ್ಯವನ್ನು ಹೆಚ್ಚಿಗೆ ಒದಗಿಸಿ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯವಾಗಿದೆ. ಅದಕ್ಕೋಸ್ಕರ ಸರ್ಕಾರದವರು ಕಣ್ವಾಪ್ರಾಜೆಕ್ಟಿಗೆ ಸಮರ್ಪಕ ನೀರು ಸರಬರಾಜು ಆಗುವ ಹಾಗೆ ಮೊದಲು ಏರ್ಪಾಡು ಮಾಡಬೇಕು. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರಾಜೆಕ್ಟನ್ನು ಕಟ್ಟಿಸಿ ಅದಕ್ಕೆ ನೀರಿನ ವಸತಿ ಇಲ್ಲದೆ ರೈತರಿಗೆ ತೊಂದರೆಯಾಗುತ್ತಾ ಇರುವುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ರೈತರಿಗೆ ಬಹಳ ನಿರಾಶೆಯಾಗುತ್ತದೆ.

ಈಗ್ಗೆ ಕೆಲವು ವರ್ಷಗಳ ಹಿಂದೆ ಕಣ್ವಾಪ್ರಾಜೆಕ್ಟಿಗೆ ನೀರನ್ನು ಒದಗಿಸುವುದಕ್ಕೆ ಮಾರಿಹಳ್ಳದ ಯೋಜನೆಯನ್ನು ಸರ್ಕಾರದವರು ಯೋಚನೆ ಮಾಡಿದ್ದರು. ಆದರೆ, ಈಚೆಗೆ ಹಳ್ಳಿಮಾಳದ ಯೋಜನೆಯನ್ನು ಪರಿಶೀಲನೆಯಿಂದ ಮಾರಿಹಳ್ಳದ ಯೋಜನೆಯನ್ನು ಕೈಬಿಡುತ್ತಾರೆಂದು ಕೇಳುತ್ತಿದ್ದೇವೆ. ಒಟ್ಟಿನಲ್ಲಿ ಶಿಂಶಾ ಮತ್ತು ಕಾವೇರಿ ಈ ಎರಡು ಯೋಜನೆಗಳನ್ನೂ ಪರಿಶೀಲಿಸಿ ಯಾವುದು ಅನುಕೂಲವೋ ಅದರಿಂದ ಬೇಗನೆ ಬೆಂಗಳೂರಿಗೆ ನೀರನ್ನೊದಗಿಸುವ ಯೋಚನೆ ಮಾಡಿ ಮಾರೀ ಹಳ್ಳದ ಯೋಜನೆಯನ್ನು ಕೂಡಲೇ ಕಾರ್ಯಗತ ಮಾಡಬೇಕಾಗಿ ಒತ್ತಾಯ ಪೂರ್ವಕವಾಗಿ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನರ್ಪಿಸುವ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಒತ್ತಿ ಹೇಳಬೇಕೆಂದು ಇಚ್ಛಿಸುತ್ತೇನೆ.

ರಾಜ್ಯಪಾಲರು, ನಮ್ಮ ದೇಶದಲ್ಲಿ ರಾಷ್ಟ್ರೀಯ ವಿಸ್ತರಣಾ ಬ್ಲಾಕುಗಳನ್ನು ಕೊಟ್ಟು ದೇಶವನ್ನು ಬಹಳಮಟ್ಟಿಗೆ ಅಭಿವೃದ್ಧಿಪಡಿಸುತ್ತಾ ಅದನ್ನು ಸುಖೀ ರಾಜ್ಯದತ್ತ ಕೊಂಡೊಯ್ಯುತ್ತಿದ್ದೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಕೆಲವು ದೋಷ ದೋಷಗಳೆದ್ದು, ಈ ದೇಶ ಸುಖೀರಾಜ್ಯವಾಗುವುದು ಹೋಗಿ ಎಲ್ಲಿ ದುಃಖೀರಾಜ್ಯವಾಗುತ್ತದೋ ಎನ್ನುವ ಭಯ ವಿದೆ. ಆದ್ದರಿಂದ ಇಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಕೆಲವು ಮುಖ್ಯಾಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಈ ಯೋಜನೆಗಳನ್ನು ಜಾರಿಗೆ ಕೊಟ್ಟಿದ್ದಾಗಿದೆಯೇ ಹೊರತು ಅಲ್ಲಿ ಅಧಿಕಾರಿಗಳಿಲ್ಲದೆ ಕೆಲಸಗಳು ಜರಗಿಲ್ಲ. ಉದಾಹರಣೆಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎರಡನೆಯ ಹಂತದ ಬ್ಲಾಕ್ ಕೊಟ್ಟಿರುವಾಗ ಅಲ್ಲ ಕೆಲಸಮಾಡಲು ಅಧಿಕಾರಿಗಳೇ ಇಲ್ಲವೆಂದರೆ ಏನು ಹೇಳಲು. ಯಾವಾಗ ಒಂದು ಬ್ಲಾಕ್ ಮಂಜೂರಾಯಿತೋ ಆಗ್ಗೆ ಅಲ್ಲಿಗೆ ಬೇಕಾದ ಕಟ್ಟಡದ ಹಣ, ಮುಂತಾದುವುಗಳನ್ನು ಕೊಡದೆ ಹೋದರೆ ಅದು ಹೇಗೆ ನಡೆಯುತ್ತದೆಂಬುದನ್ನು ಯೋಚನೆ ಮಾಡಬೇಕಾಗಿದೆ.

ಆಮೇಲೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡ್‌ಗಳನ್ನು ಪ್ರಸ್ತಾಪಿಸುತ್ತಾ ಅವು ದೇಶದ ಅಭಿವೃದ್ಧಿಯ ಏಜೆಂಟರುಗಳೆಂದು ಹೇಳಿದ್ದಾರೆ. ಆದರೆ ನನ್ನ ಅನುಭವವನ್ನು ಹೇಳುವುದಾದರೆ, ಈ ಪಂಚಾಯ್ತಿ ಮತ್ತು ತಾಲ್ಲೂಕ್ ಬೋರ್ಡ್‌ಗಳನ್ನು ನಾವು ಎಷ್ಟೋ ಚೆನ್ನಾಗಿ ನಡೆಸಬೇಕೆಂಬ ಆಸೆಯುಳ್ಳವರಾಗಿದ್ದರೂ ಕೂಡ, ಕಾರ್ಯ ನಡೆಸುವ ಸಂದರ್ಭದಲ್ಲಿ ಬರತಕ್ಕ ಕುಂದುಕೊರತೆಗಳನ್ನು ನೋಡಿದರೆ ನಮ್ಮ ಉತ್ಸಾಹವೆಲ್ಲಾ ನಿರಾತ್ಸಾಹವಾಗುತ್ತದೆ. ಈ ಸೆಮಿನಾರ್‌ಗಳನ್ನು ಮಾಡಿ ಮಂತ್ರಿಗಳನ್ನು ಕರೆಸಿಕೊಂಡು ಈ ತೊಂದರೆಗಳನ್ನೆಲ್ಲಾ ನಿವೇದನೆ ಮಾಡಿಕೊಂಡರೂ,